# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಡಾ. ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 918 |
| ಉತ್ತರಿಸಬೇಕಾದ ದಿನಾಂಕ | : | 13.12.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಉತ್ಪಾದಿಸುವ ರೈತರಿಗೆ ಹಾಲಿಗೆ ಸರಿಯಾದ ಬೆಲೆ ಸಿಗದಿರುವುದು ಹಾಗೂ ಉತ್ಪಾದನಾ ವೆಚ್ಚ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ಹಾಲು ಮಹಾಮಂಡಳ ವ್ಯಾಪ್ತಿಯ ಜಿಲ್ಲಾ ಹಾಲು ಒಕ್ಕೂಟಗಳು ಪ್ರಸ್ತುತ ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ ಸರಾಸರಿ ರೂ.33.09 ಪಾವತಿಸಲಾಗುತ್ತಿದೆ. ರಾಜ್ಯ ಸರ್ಕಾರವೂ ಸಹ ರೂ.5/-ಗಳ ಪ್ರೋತ್ಸಾಹಧನ ನೀಡುತ್ತಿದ್ದು, ಹಾಲಿನ ಉತ್ಪಾದನೆಯ ವೆಚ್ಚಕ್ಕನುಗುಣವಾಗಿ ಬೆಲೆಯನ್ನು ಪರಿಷ್ಕರಿಸಲಾಗುವುದು. |
| ಆ | ಗೋಹತ್ಯೆ ನಿಷೇದ ಕಾಯ್ದೆ ಜಾರಿಯಾದ ನಂತರ ತಮ್ಮ ಹಸುಗಳಿಗೆ ಸರಿಯಾದ ಬೆಲೆ ಸಿಗದೇ ರೈತರು ಆತಂಕಕಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗೋಹತ್ಯೆ ನಿಷೇದ ಕಾಯ್ದೆ ಜಾರಿಯಾದ ನಂತರ ತಮ್ಮ ಹಸುಗಳಿಗೆ ಸರಿಯಾದ ಬೆಲೆ ಸಿಗದೇ ರೈತರು ಆತಂಕಕಾರಿಯಾಗಿರುವ ಯಾವುದೇ ವರದಿಗಳು ಇರುವುದಿಲ್ಲ.<br><br>ಆದಾಗ್ಯೂ, ರೈತರ ವಯಸ್ಸಾದ ಸಾಕಲಾಗದ, ನಿರುಪಯುಕ್ತ, ಅನಾರೋಗ್ಯ ಪೀಡಿತ, ಅನಧಿಕೃತ ಜಾನುವಾರುಗಳ ಸಾಗಾಣಿಕೆ ಸಮಯದಲ್ಲಿ ವಶಪಡಿಸಿಕೊಂಡ ಜಾನುವಾರುಗಳನ್ನು ಮಾನ್ಯ ನ್ಯಾಯಾಲಯದ ಆದೇಶದನ್ವಯ ಜಾನುವಾರುಗಳನ್ನು ನಿರ್ವಹಣೆ ಮಾಡಲು ರಾಜ್ಯದ 31 ಜಿಲ್ಲೆಗಳಲ್ಲಿ 30 ಗೋಶಾಲೆಗಳನ್ನು ನಿರ್ಮಿಸಲಾಗಿದೆ.<br>16 ಗೋಶಾಲೆಗಳಲ್ಲಿ 811 ಜಾನುವಾರುಗಳನ್ನು ನಿರ್ವಹಣೆ ಮಾಡಲಾಗುತ್ತಿದೆ.<br><br>ಅಲ್ಲದೇ 227 ಖಾಸಗಿ ಗೋಶಾಲೆಗಳಲ್ಲಿ 33787 ಜಾನುವಾರುಗಳನ್ನು ನಿರ್ವಹಣೆ ಮಾಡಲಾಗುತ್ತಿದೆ.<br><br>ಪುಣ್ಯ ಕೋಟಿ ದತ್ತು ಯೋಜನೆ (www.punyakoti.karahvs.in) web portal ನಲ್ಲಿ ಒಟ್ಟು 227 ಗೋಶಾಲೆಗಳು ನೋಂದಣಿಯಾಗಿರುತ್ತವೆ. ಈ ಗೋಶಾಲೆಗಳಲ್ಲಿ ಒಟ್ಟು 33787 ಜಾನುವಾರುಗಳು ಇರುತ್ತವೆ. ಮಾರ್ಚ್-2023 ನೇ ಮಾಹೆಯಲ್ಲಿ ಈ ಜಾನುವಾರುಗಳ ನಿರ್ವಹಣೆಗೆ ರೂ.27.35 ಕೋಟಿ ಅನುದಾನ ನೀಡಲಾಗಿದೆ. |

| | | |
|---|---|---|
| ಇ | ಕೆಲವೊಂದು ರಾಜ್ಯಗಳಲ್ಲಿ ಹಾಲಿಗೆ ಉತ್ತಮ ಬೆಲೆ ಕೊಡುತ್ತಿರುವಂತೆ ಕರ್ನಾಟಕ ರಾಜ್ಯದಲ್ಲಿಯೂ ಸಹ ಹಾಲಿನ ಬೆಲೆಯನ್ನು ಹೆಚ್ಚಿಸಬಹುದಲ್ಲವೇ; | ರಾಜ್ಯ ಸರ್ಕಾರವು ಇತ್ತೀಚಿಗೆ ದಿನಾಂಕ:01.08.2023 ರಿಂದ ಹಾಲಿನ ಮಾರಾಟದರವನ್ನು ಪ್ರತಿ ಲೀಟರ್‌ಗೆ ರೂ.3.00 ಹೆಚ್ಚಿಸಿದ್ದು, ಹೆಚ್ಚಿಸಿದ್ದ ಪೂರ್ಣ ಮೊತ್ತವನ್ನು ಹಾಲು ಉತ್ಪಾದಕರಿಗೆ ನೀಡಲಾಗುತ್ತಿದೆ. ಗ್ರಾಹಕರ ಹಿತದೃಷ್ಠಿಯಿಂದ ಹಂತ ಹಂತವಾಗಿ ಹಾಲಿನ ಮಾರಾಟ ದರವನ್ನು ಪರಿಷ್ಕರಿಸಿ ಖರೀದಿ ದರವನ್ನು ಸಹ ಹೆಚ್ಚಿಸುವ ಮೂಲಕ ಉತ್ಪಾದಕರಿಗೆ ಉತ್ತೇಜನ ನೀಡಲಾಗುವುದು. |
| ಈ | ನಿರುಪಯುಕ್ತ ಹಸುಗಳಾದಾಗ ಅಂತಹ ಹಸುಗಳಿಗೆ ಸರ್ಕಾರ ಆರ್ಥಿಕ ಪರಿಹಾರ ನೀಡಬಹುದಲ್ಲವೇ? | ನಿರುಪಯುಕ್ತ ಜಾನುವಾರುಗಳಿಗೆ ಆರ್ಥಿಕ ಪರಿಹಾರ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

**ಇ- ಪಸಂಮೀ 249 ಸಲೆವಿ 2023**

(ಕೆ. ವೆಂಕಟೇಶ್)
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**